

# ರಾಜಕೀಯದಿಂದ ಹೊಸತನಕ್ಕೆ ಅಡ್ಡಿ

**ನಾರಾಯಣಸ್ವಾಮಿ ಎಸ್.**
ಉದಯದ 'ಜೋಜೋ ಲಾಲಿ'ಯ ಮಾಧವ

● *ಮಾಧವನ ಪಾತ್ರದ ಬಗ್ಗೆ ಹೇಳುವುದಾದರೆ...*

ದೊಡ್ಡ ಉದ್ಯಮಿ. ಸಿಕ್ಕಾಪಟ್ಟೆ ಶ್ರೀಮಂತ. ವಾಸ್ತವವಾದಿ ನೆಲೆಯಲ್ಲಿ ಬದುಕನ್ನು ನೋಡುವ ವ್ಯಕ್ತಿ. ಮಗು ಆಗಿಲ್ಲ ಎನ್ನುವುದು ಅವನ ದೊಡ್ಡ ಕೊರಗು. ತನ್ನ ಪತ್ನಿಯಲ್ಲಿರುವ ದೋಷವನ್ನು ಮುಚ್ಚಿಡಲು ತನ್ನಲ್ಲೇ ಏನೋ ಸಮಸ್ಯೆ ಇದೆ ಎಂದು ಹೇಳಿಕೊಳ್ಳುತ್ತಾನೆ. ದೇವರ ಮೇಲಿನ ಭಕ್ತಿ– ಭಾವಕ್ಕಿಂತ ಶ್ರಮಕ್ಕೆ ಮೌಲ್ಯ ಕೊಡುತ್ತಾನೆ. ಆದರೆ, ಹೆಂಡತಿಗಾಗಿ ದೇವಸ್ಥಾನಗಳಿಗೆ ಭೇಟಿ ಕೊಡುತ್ತಾನೆ. ಒಮ್ಮೆ ದೇವರ ದರ್ಶನಕ್ಕೆ ಕಾಯುತ್ತಿದ್ದಾಗ ಸಂತ ಒಬ್ಬ ಎದುರುಗೊಂಡು ಆತನ ಚಿಂತೆಗೆ ಪೂರ್ವ ಜನ್ಮದ ದೋಷವೇ ಕಾರಣ ಎಂದು ಹೇಳುತ್ತಾರೆ. ಅದನ್ನು ನಂಬದ ಮಾಧವ ಅವರನ್ನು ಅನುಮಾನಿಸುತ್ತಾನೆ. ದುಡ್ಡು ಬೇಕಾದರೆ ಕೊಡುತ್ತೇನೆ ಸುಳ್ಳು ಪೊಳ್ಳು ಹೇಳಬೇಡ ಎಂದು ಜೋರು ಮಾಡಿ ಕಳುಹಿಸುತ್ತಾನೆ. ಕ್ರಮೇಣ ಪತ್ನಿಯ ಕಾರಣಕ್ಕೆ ಸಂತನ ಮಾತಿನಲ್ಲಿ ನಂಬಿಕೆ ಹುಟ್ಟುತ್ತದೆ. ಆದರೆ ಆತನ ದರ್ಶನ ಸಿಗುವುದಿಲ್ಲ. ಇನ್ನೇನು ಕಣ್ಣೆದುರು ಇದ್ದಾರೆ ಎನ್ನುವಷ್ಟರಲ್ಲಿ ಮಾಯವಾಗುತ್ತಾರೆ.

● *ದತ್ತು ರಾದ್ಧಾಂತ ಆಗಿದ್ದು ಏಕೆ?*

ಅತ್ತಿಗೆಗೆ ತನ್ನ ಮಗನನ್ನು ದತ್ತು ಕೊಡಬೇಕು ಎಂಬ ಆಸೆ. ಅಪಾರ ಸಂಪತ್ತಿನ ಒಡೆತನ ತನ್ನ ಮಗನಿಗೆ ಅನಾಮತ್ತಾಗಿ ದಕ್ಕಬೇಕು ಎನ್ನುವ ಬಯಕೆ ಆಕೆಯದು. ನನಗೆ ಅನಾಥ ಮಗು ಪಡೆಯುವುದೇ ಒಳಿತು ಎನ್ನುವ ಭಾವನೆ. ಅದಕ್ಕಾಗಿ ಅನಾಥಾಲಯದಲ್ಲಿ ಪ್ರಯತ್ನಿಸುತ್ತೇವೆ. ಮಗು ಹೆಣ್ಣು– ಗಂಡು ಭೇದ ಮಾಡಬಾರದು ಎನ್ನುವ ಷರತ್ತು ಒಪ್ಪುತ್ತೇವೆ. ಕಪ್ಪು– ಬಿಳುಪು ಲೆಕ್ಕಾಹಾಕಬಾರದು ಅದಕ್ಕೂ ಸೈ ಎನ್ನುತ್ತೇವೆ. ಆದರೂ ಅಲ್ಲಿ ನಮಗೆ ಮಗು ಸಿಗುವುದಿಲ್ಲ. ಅದೇ ಸಮಯಕ್ಕೆ ನಡೆಯುವ ಕೆಲವು ಘಟನೆಗಳು ಸಂತನ ಮಾತಿನಲ್ಲಿ ವಿಶ್ವಾಸ ಹುಟ್ಟಿಸಿದೆ.

● *ಧಾರಾವಾಹಿ ನಿರ್ಮಾಣ– ನಿರ್ದೇಶನದತ್ತ ಏಕೆ ಹೆಜ್ಜೆ ಇಟ್ಟಿಲ್ಲ?*

ವಾಹಿನಿಗಳ ರಾಜಕಾರಣ ಅದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ಒಬ್ಬರಿಗೆ ನಾಲ್ಕೈದು ಸ್ಲಾಟ್‌ಗಳು ಕೊಡುತ್ತಿವೆ. ಹೀಗಾಗಿ ಹೊಸಬರಿಗೆ ಅವಕಾಶಗಳು ಸಿಗುತ್ತಿಲ್ಲ. ಒಬ್ಬರಿಗೆ ಒಂದೇ ಧಾರಾವಾಹಿ ಆಗಿದ್ದರೆ ಗುಣಮಟ್ಟವೂ ಚೆನ್ನಾಗಿರುತ್ತದೆ. ವೈವಿಧ್ಯತೆಯೂ ಇರುತ್ತದೆ. ಮೊದಲು ಹಿನ್ನೆಲೆ ಗಾಯನದಲ್ಲಿ ಎಸ್‌ಪಿಬಿ ಮತ್ತು ಎಸ್.ಜಾನಕಿ ಆವರಿಸಿದ್ದರು. ಆಗ ಸ್ವತಃ ಎಸ್‌ಪಿಬಿ ಅವರೇ ಯುವಕರಿಗೆ ಅವಕಾಶ ಕೊಡಿ ತಮಗೆ ಸಾಕು ಎಂದು ಹೇಳಿದರು. ಯಾವತ್ತೂ ಹೊಸ ತಲೆಮಾರಿಗೆ ಅವಕಾಶ ಸಿಗುವಂತೆ ಯೋಚಿಸಬೇಕು.

● *ಅಂದರೆ ಅದರಲ್ಲಿ ಏನೋ ಇದೆ ಅಂತ ಅನ್ನಿಸುತ್ತಾ?*

ಇರಲೇಬೇಕಲ್ಲ. ಕೆಲವರಿಗೇ ಹೆಚ್ಚು ಒತ್ತು ಕೊಡುತ್ತಾರೆ ಎಂದರೆ ಏನೇನೋ ಇರುತ್ತದೆ. ವೈಯಕ್ತಿಕವಾಗಿ ನನಗೆ ಕೆಲಸ ಮುಖ್ಯವೇ ಹೊರತು ಸ್ನೇಹ ಅಲ್ಲ. ನಾನೇ ಒಂದು ಪಕ್ಷ ನಿರ್ಮಾಣಕ್ಕೆ ಕೈ ಹಾಕಿದರೆ ಗುಣಕ್ಕೆ ಮಾತ್ರ ಪ್ರಾಮುಖ್ಯತೆ ಕೊಡುತ್ತೇನೆ. ಸ್ನೇಹ– ಪ್ರೀತಿ ಆನಂತರದ್ದು. ಪಾತ್ರಕ್ಕೆ ಹಿಡಿಸಿದ ವ್ಯಕ್ತಿ ನನ್ನ ಶತ್ರುನೇ ಆಗಿದ್ದರೂ ಅವನಿಂದ ಕೆಲಸ ಮಾಡುತ್ತೇನೆ. ಇಲ್ಲಿ ನಮ್ಮ ವೈಯಕ್ತಿಕ ಭಾಂದವ್ಯ ಬೇಕಾಗುವುದಿಲ್ಲ. ಅವನ ಪಾಡಿಗೆ ಅವನು ಕೆಲಸ ಮಾಡುತ್ತಾನೆ, ನನ್ನ ಪಾಡಿಗೆ ನಾನು ಕೆಲಸ ಮಾಡಿಸುತ್ತೇನೆ. ಒಂದು ಪಾತ್ರಕ್ಕೆ ಇಂತಹ ವ್ಯಕ್ತಿ ಬೇಕು ಅಂದರೆ ಹೇಗಾದರೂ ಮಾಡಿ ಅವರನ್ನು ಒಪ್ಪಿಸುತ್ತೇನೆ. ಮರಕ್ಕಿಂತ ಮರ ದೊಡ್ಡದಿರುತ್ತೆ ಎನ್ನುವ ಮಾತು ಸುಳ್ಳಲ್ಲ. ಒಂದಲ್ಲ ನಾಲ್ಕು ಬಾರಿ ಕುಳಿತು ಮಾತಾಡಿ ಅಂತಹ ಕಲಾವಿದನನ್ನು ಒಪ್ಪಿಸುತ್ತೇನೆ.

● **ಹೊಸಬರಿಗೆ ಇರುವ ಮನ್ನಣೆ ಹಳಬರಿಗೆ ಇಲ್ಲ ಎನ್ನುವ ದೂರಿದೆ?**

ಹದಿನೆಂಟು ವರ್ಷಗಳ ಹಿಂದೆ ನಾನೂ ಹೊಸಬ. ಆಗ ಹಿರಿಯ ನಟರು ನನ್ನನ್ನು ಸ್ವಾಗತಿಸಿ ಕಲಿಸದಿದ್ದರೆ ನಾನು ಇವತ್ತು ಇಲ್ಲಿ ಏನೂ ಆಗಿರುತ್ತಿರಲಿಲ್ಲ. ಯಾವುದೂ ನಿಂತ ನೀರಿನಂತೆ ಆಗಬಾರದು. ಚಲನಶೀಲತೆ ಬೇಕೇ ಬೇಕು. ಹೊಸಬರೂ ಬರಬೇಕು. ಜೊತೆಗೆ ಹಳಬರೂ ಉಳಿಯಬೇಕು. ಆಗ ಪರಸ್ಪರರ ಕಲಿಕೆ, ಅನುಭವದ ವಿನಿಮಯ ಚೆನ್ನಾಗಿರುತ್ತದೆ. ಬರೀ ಹೊಸಬರೇ ತುಂಬಿದರೆ ಅದೂ ಕಷ್ಟ. ಹೊಸಬರಿಗೊಂದು ಹೇಳುವುದೆಂದರೆ ಬರುವ ಮುನ್ನ ಸ್ವಲ್ಪ ತಾಲೀಮು ಅಗತ್ಯ ಎನಿಸುತ್ತದೆ. ಸುಂದರವಾಗಿದ್ದ ಮಾತ್ರಕ್ಕೆ ನಟ– ನಟಿಯರು ಆಗಲು ಸಾಧ್ಯವಿಲ್ಲ. ಅದಕ್ಕೆ ಬೇಕಾಗುವ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಸೌಂದರ್ಯಕ್ಕೂ ಕಲೆಗೂ ಸಂಬಂಧ ಇಲ್ಲ. ಯಾರದೋ ಒತ್ತಾಯಕ್ಕೆ ನಟರಾಗುವುದಕ್ಕಿಂತ ಇಷ್ಟಪಟ್ಟು ನಟರಾದರೆ ಖಂಡಿತ ಭವಿಷ್ಯ ಇದೆ. ಯಾರು ಏನೇ ಹೇಳಿಕೊಟ್ಟರು ಆಂಗಿಕ ಅಭಿನಯವನ್ನು ಕಲಿಸಲು ಸಾಧ್ಯ ಇಲ್ಲ. ಅದು ನಟನ ಅಂತರ್ಯದಲ್ಲಿ ಹುಟ್ಟಬೇಕು. ಅದಕ್ಕೆ ರಂಗ ತಾಲೀಮು ಹೆಚ್ಚು ಸಹಾಯಕ್ಕೆ ಬರಬಹುದು ಎನ್ನುವುದು ನನ್ನ ಅಭಿಪ್ರಾಯ.

● *ನೀವು ಆಕಸ್ಮಿಕ ನಟರಾಗಿದ್ದೋ? ಅಥವಾ ಉದ್ದೇಶ ಇತ್ತೋ?*

ಬಹುರಾಷ್ಟ್ರೀಯ ಕಂಪೆನಿಯಲ್ಲಿ ಕೆಲಸದಲ್ಲಿದ್ದೆ. ಅದನ್ನು ಬಿಟ್ಟು ಕಲೆಯನ್ನು ಒಪ್ಪಿ ಬಂದಿದ್ದೇನೆ. ಅಂದರೆ ನಾನು ಇದೇ ಆಗಬೇಕು ಎಂದುಕೊಂಡು ಬಂದವನು. ಇಲ್ಲಿಗೆ ಬರಲು ಕಾರಣರಾಗಿದ್ದು ನಮ್ಮ ತಂದೆ. ಬೆಂಗಳೂರಿನ ಬೀದಿಯಲ್ಲಿ ಆಡಿ ಬೆಳೆದವನು ನಾನು. ರಜೆಯಲ್ಲಿ ಸುಮ್ಮನೆ ಬೀದಿ ಸುತ್ತುತ್ತಾನೆ ಎಂದು ನಮ್ಮಪ್ಪ 'ಕಲಾ ಸಂಪದ' ನಡೆಸುತ್ತಿದ್ದ ಬೇಸಿಗೆ ಶಿಬಿರಕ್ಕೆ ಕಳುಹಿಸಿದರು. ಅಲ್ಲಿ ಕರಾಟೆಯ ಜೊತೆಗೆ ನಟನೆ, ಡಾನ್ಸ್ ಹೇಳಿಕೊಟ್ಟರು. ಅಲ್ಲಿ ನಿರಂತರವಾಗಿ ಭಾಗವಹಿಸುವ ಮೂಲಕ ನಟನಾಗಿ ಬೆಳೆದೆ. ಈಗ ಸಿನಿಮಾ– ಕಿರುತೆರೆಯಲ್ಲಿ ಬಿಡುವು ಇಲ್ಲದಂತೆ ತೊಡಗಿದ್ದೇನೆ. ಬಿಡುವು ಸಿಕ್ಕರೆ ಸುತ್ತಾಟ, ಸಿನಿಮಾ ನೋಡುವ ಅಭ್ಯಾಸವನ್ನು ಈಗಲೂ ಇಟ್ಟುಕೊಂಡಿದ್ದೇನೆ.

■ **ರಾಗು**